**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**
**ದಿಃ 22.01.2025**

**ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ ಎಸ್ ಸಿ ವಕೀಲರಿಂದ**

ದಾವಾಸ್ವತ್ತಿನ ಮೂಲ ಸರ್ವೆ ನಂಬರ **42/5** ಎಂದರೆ ಸರಿ . ದಾವಾಸ್ವತ್ತನ್ನು **1** ನೇ ಪ್ರತಿವಾದಿಯ ತಂದೆಯವರಿಗೆ ನಮ್ಮ ತಂದೆ ಮಾರಾಟ ಮಾಡಲು ದಿಃ **21.08.1974** ರಲ್ಲಿ ರೂ **4,500/-** ಗಳಿಗೆ ಒಂದು ಕರಾರು ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರಿನಂತೆ ನನ್ನ ತಂದೆ ರೂ **2,150/-** ಗಳನ್ನು ಮುಂಗಡವಾಗಿ ಹೊಂದಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಲ್ಯಾಂಡ್ ಟ್ರಿಬುನಲ್ ನಲ್ಲಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಬಿ ಸುಬ್ಬಣ್ಣ ರೈ ರವರು ಪ್ರಕರಣ ದಾಖಲಿಸಿದ್ದರಿಂದ ನನ್ನ ತಂದೆ **1** ನೇ ಪ್ರತಿವಾದಿ ತಂದೆಗೆ ದಾವಾಸ್ವತ್ತನ್ನು ನೊಂದಣಿ ಮಾಡಿಕೊಡಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ. ದಿಃ **08.07.1993** ರಂದು ನನ್ನ ತಂದೆ **1** ನೇ ಪ್ರತಿವಾದಿಯ ತಂದೆಯವರಿಗೆ ನೊಂದಾಯಿತ ಅಧಿಕಾರ ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ನಡೆಸಲು ಮಾಡಿಕೊಟ್ಟಿದ್ದರು ಎಂದು ನುಡಿಯುವವರು . **ಸಾಕ್ಷಿಗೆ ಸದರಿ ಅಧಿಕಾರ ಪತ್ರವನ್ನು ತೋರಿಸಲಾಗಿ ಸಾಕ್ಷಿ ಅದೇ ಅಧಿಕಾರ ಪತ್ರವನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ನಡೆಸಲು ನೀಡಿದ್ದರು ಎಂದು ಒಪ್ಪಿಕೊಂಡ ಮೇರೆಗೆ ಅದನ್ನು ನಿಡಿ 7 ಎಂದು ಗುರುತಿಸಲಾಯಿತು.** ನಂತರ **1** ನೇ ಪ್ರತಿವಾದಿಯ ತಂದೆ ಸದರಿ ಅಧಿಕಾರ ಪತ್ರದ ಮೇರೆಗೆ ಸುಬ್ಬಣ್ಣ ರೈ ರವರಿಗೂ ಹಾಗೂ ನನ್ನ ತಂದೆಯ ನಡುವೆ ಇದ್ದಂತಹ ವ್ಯಾಜ್ಯವನ್ನು ರಾಜಿ ಮಾಡಿಸಿದರು ಎಂದರೆ ಸರಿ . ನಿಡಿ **6** ರ ಪ್ರಕಾರ ತಹಶೀಲ್ದಾರವರು ದಾವಾಸ್ವತ್ತನ್ನು ಸರ್ವೆ ಮಾಡಿ ಅದರಲ್ಲಿ ಸುಬ್ಬಣ್ಣ ರೈ ರವರು ಸ್ವಾಧೀನದಲ್ಲಿದ್ದ ಮನೆ ಹಾಗೂ ದನದ ಕೊಟ್ಟಡಿ

ಇದ್ದಂತಹ **20** ಸೆಂಟ್ ಜಾಗವನ್ನು ಅವರಿಗೆ ಬಿಟ್ಟುಕೊಡಲಾಯಿುತು ಎಂದರೆ ಸರಿಯಲ್ಲ. ದಿಃ **10.10.1999** ರಂದು ಸದರಿ **20** ಸೆಂಟ್ ಜಾಗವನ್ನು ಸುಬ್ಬಣ್ಣ ರೈ ರವರು **1** ನೇ ಪ್ರತಿವಾದಿಯ ತಂದೆಗೆ ರೂ **55,000/-** ಗಳನ್ನು ಪಡೆದು ಒಪ್ಪಂದ ಪತ್ರದ ಮೂಲಕ ಸ್ವಾಧೀನ ಬಿಟ್ಟುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ **7** ರ ಪ್ರಕಾರ ದಾವಾ ಆಸ್ತಿಯ ಸ್ವಾಧೀನ , ಕೃಷಿ ಮಾಡಲು ಹಾಗೂ ಕೃಷಿ ಉತ್ಪನ್ನ ಪಡೆಯಲು ಸಂಪೂರ್ಣ ಅಧಿಕಾರ ಪಡೆಯಲು **1** ನೇ ಪ್ರತಿವಾದಿಯ ತಂದೆಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿಃ **08.07.1993** ರಿಂದ ಇಲ್ಲಿಯವರೆಗೆ ಪ್ರತಿವಾದಿಗಳೇ ದಾವಾಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದ ಕಂಡಿಕೆ **7** ರಲ್ಲಿ ತಿಳಿಸಿರುವಂತೆ ಮಾರ್ಚ **20** ರ ನಂತರ ಪ್ರತಿವಾದಿಗಳು ದಾವಾಸ್ವತ್ತನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ತಂದೆಯ **25** ಪತ್ರಗಳೆಂದು ತೋರಿಸಿದ ಪತ್ರಗಳನ್ನು ನೋಡಿ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುವವರು .

ದಿಃ **05.04.2005** ರಂದು ನನ್ನ ತಂದೆ ಮೃತರಾಗಿರುತ್ತಾರೆ ಎಂದರೆ ಸರಿ . ದಿಃ **24.01.2005** ರಂದು ನನ್ನ ತಂದೆ ಪ್ರತಿವಾದಿಯ ಹೆಸರಿಗೆ ಮರಣ ಶಾಸನ ಬರೆದಿಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ನಿರಾಕರಿಸಿರುತ್ತಾರೆ . ಸದರಿ ಮರಣಶಾಸನದ ಪ್ರಕಾರವಾಗಿ ಪ್ರತಿವಾದಿ ದಾವಾ ಸ್ವತ್ತಿನ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾಸ್ವತ್ತಿನ ಖಾತಾ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಸಮಯದಲ್ಲಿ ನಾನು ಅಕ್ರಮವಾಗಿ ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೆ ಸಮಯದಲ್ಲಿ ದಾವಾಸ್ವತ್ತು ನಮ್ಮ ಸ್ವಾಧೀನದಲ್ಲಿ

ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ದಾವಾಸ್ವತ್ತನ್ನು ಮರಣಶಾಸನದ ಮೂಲಕ ಪ್ರತಿವಾದಿಗೆ ವಿಕ್ರಯಿಿಸಿರುವ ಕಾರಣ ದಾವಾಸ್ವತ್ತಿನ ಮೇಲೆ ನನಗೆ ಯಾವುದೆ ಮಾಲೀಕತ್ವದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ **1974** ರಲ್ಲಿ ದಾವಾ ಆಸ್ತಿಯ ಸಬಂಧಸಿದಂತೆ ಒಪ್ಪಂದ ಪತ್ರದ ಮೂಲಕ ಮುಂಗಡ ಹಣ ಪಡೆದಿದ್ದು ನಂತರ ದಿನದಲ್ಲಿ ಸಂಪೂರ್ಣ ಹಣ ಪಡೆದು ಸ್ವಾಧೀನ ಬಿಟ್ಟುಕೊಟ್ಟಿರುವ ಕಾರಣ ದಾವಾಸ್ವತ್ತಿನ ಮೇಲೆ ನಮಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಾವಾಸ್ವತ್ತಿನಲ್ಲಿ ಕಾಫಿ ಕೃಷಿ ಮಾಡಲಾಗುತ್ತದೆ . ದಾವಾಸ್ವತ್ತನ್ನು **1972** ರಲ್ಲಿ ಕಾಫಿ ಕೃಷಿಗೆ ಒಳಪಡಿಸಿರಬಹುದು . **1992** ರ ಪೂರ್ವದಲ್ಲಿ ಕಾಫಿ ಕೃಷಿ ಮಾಡಲು ಕಾಫಿ ನೊಂದಾಣಿ ಪತ್ರವನ್ನು , ಟ್ರಾನ್ಸಪೋರ್ಟ್ ಪರಮಿಟ **3** ನ್ನು ತಹಶೀಲ್ದಾರವರಿಂದ ನನ್ನ ತಂದೆ ಹೊಂದಿಕೊಂಡಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ. ಕಾಫಿಯನ್ನು ಸಂಸ್ಕರಿಸಲು ಪರವಾನಗಿಯನ್ನು ಹೊಂದಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆಯ ಮರಣ ನಂತರ ದಾವೆ ಸಲ್ಲಿಸುವವರೆಗೂ ದಾವೆ ಸ್ವತ್ತಿನಲ್ಲಿ ಕಾಫಿ ಕೃಷಿಯನ್ನು ಕೂಲಿ ಹಾಳುಗಳ ಮೂಲಕ ಮಾಡಲು ಹಾಜರಾತಿ ಪುಸ್ತಕವನ್ನು ನಾವು ನಿರ್ವಹಿಸಿರುವುದಿಲ್ಲ. ದಾವಾ ಆಸ್ತಿಯನ್ನು ನಿರ್ವಣೆ ಮಾಡಲು ಗೊಬ್ಬರ ಖರೀದಿ ಮಾಡಿರುವ ಬಗ್ಗೆ ರಶೀದಿ ಇದ್ದು ಅದು ಕಾಣೆಯಾಗಿರುತ್ತದೆ . ಕಾಫಿಯನ್ನು ಮಾರಾಟ ಮಾಡಿರುವ ಬಗ್ಗೆ ನಾನು ಯಾವುದೆ ರಶೀದಿಯನ್ನು ಹೊಂದಿರುವುದಿಲ್ಲ. ಕಾಫಿ ಮಾರಾಟ ಮಾಡಿದ ಬಂದ ಹಣ ನಮ್ಮ ಯಾರದೆ ಖಾತೆಗೆ ಬಂದಿರುವುದಿಲ್ಲ. ಅದನ್ನು ನಾವು ನಗದಾಗಿ ಪಡೆದಿರುತ್ತೇವೆ . ಆಸ್ತಿ ನಿರ್ವಣೆಗೆ ಖರ್ಚು ಮಾಡಿರುವ ಬಗ್ಗೆ ಯಾವುದೆ ದಾಖಲೆಗಳು ಇಲ್ಲ. ದಾವಾ ಸ್ವತ್ತಿನಲ್ಲಿ ಉತ್ಪನ್ನಗಳು ಬಂದಿರುವ ಬಗ್ಗೆಯೂ ಯಾವುದೆ ದಾಖಲೆಗಳು ಇಲ್ಲ.

ದಾವಾಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ರಶೀದಿಗಳು ಕೆಲವು ಇದ್ದು ಇನ್ನು ಕೆಲವು ಇರುವುದಿಲ್ಲ. **1995** ರ ಪೂರ್ವದಲ್ಲಿ ಪ್ರತಿವಾದಿಯ ತಂದೆ ದಾವಾಸ್ವತ್ತಿಗೆ ಕಂದಾಯ ಪಾವತಿ ಮಾಡುತ್ತಿದ್ದು, **1995** ರ ನಂತರ ಪ್ರತಿವಾದಿಯೆ ದಾವಾಸ್ವತ್ತಿಗೆ ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾಸ್ವತ್ತಿಗೆ ನಮಗೆ ಯಾವುದೆ ಮಾಲೀಕತ್ವದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ನಾವು ಯಾವುದೆ ಸಮಯದಲ್ಲಿ ಸ್ವಾಧೀನದಲ್ಲಿ ಇರಲಿಲ್ಲ. ದಾವಾಸ್ವತ್ತಿಗೆ ಪ್ರತಿವಾದಿಯೆ ಮಾಲೀಕರು ಎಂದರೆ ಸರಿಯಲ್ಲ. ಆದಕಾರಣ ನಾನು ಸಲ್ಲಿಸಿರುವ ದಾವೆ ಹಾಗೂ ಪರಿಹಾರ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ